ಶ್ರೀ ರಮೇಶ್‌ಕುಮಾರ್.—ಒಟ್ಟು ೫೬ ಸಾರ್ವಜನಿಕ ಉದ್ದಿಮೆಗಳು ಇದೆ. ಮೂವತ್ತಮೂರು ನಷ್ಟದಲ್ಲಿದೆ ಎಂದು ಹೇಳಿ ಹತ್ತು ಉದ್ದಿಮೆಗಳ ವಿವರಗಳನ್ನು ಕೊಟ್ಟಿಲ್ಲ. ಇಪ್ಪತ್ತಮೂರು ಉದ್ದಿಮೆಗಳಿಂದ ಒಟ್ಟು ೧೫,೪೯೩ ಲಕ್ಷ ರೂಪಾಯಿ ನಷ್ಟವಾಗಿವೆ ಎಂದು ಹೇಳಿದ್ದೀರಿ. ಇಪ್ಪತ್ತಮೂರು ಉದ್ದಿಮೆಗಳು ಏನು ಉಳಿಯುತ್ತವೆ ಅವುಗಳಲ್ಲಿಯಾದರೂ ನಷ್ಟ ಆಗದೇ ಇರುವಂತೆ ಮಾಡಲು ಮತ್ತು ಅವುಗಳಲ್ಲಿಯಾದರೂ ನೂರಕ್ಕೆ ನೂರರಷ್ಟು ಲಾಭ ಮಾಡುವುದಕ್ಕೆ ಏನು ಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್.—ಅವುಗಳನ್ನು ಪತ್ತೆ ಹಚ್ಚುವುದಕ್ಕೆ ಮಾನ್ಯ ಸದಸ್ಯರ ಸಲಹೆ ಪಡೆದು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ರಮೇಶ್‌ಕುಮಾರ್.—ಬಹಳ ಸಂತೋಷ. ನಷ್ಟವಾಗುವುದಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ. ೩,೪,೫,೬ ಮತ್ತು ೭ ಇದರಲ್ಲಿ ಸ್ವಲ್ಪ ವ್ಯವಸ್ಥಿತವಾದ ಯೋಜನೆಯನ್ನು ಇಟ್ಟುಕೊಂಡು ಕೆಲಸ ಮಾಡಿದರೆ ನಷ್ಟವನ್ನು ಅವರು ನಿವಾರಿಸಿ ಕೊಳ್ಳಬಹುದಾಗಿತ್ತು. ಮತ್ತು ಹತ್ತನೆಯ ಹೇಳಿಕೆಯಲ್ಲಿ ಮೇಲ್ಕಂಡ ಕಾರಣಗಳನ್ನು ಗಮನಿಸಿದರೆ ಉದ್ಯಮಗಳು ಲಾಭದಲ್ಲಿ ನಡೆಯಲು ಅದರ ಇಲಾಖಾ ಅಧಿಕಾರಿಗಳ ದಕ್ಷತೆ, ಕ್ರಿಯಾಶೀಲತೆಗಳು ಪಾಲುಮುಖ್ಯವಾಗಿರುತ್ತದೆ ಅದರಲ್ಲಿ ಪ್ರಧಾನಾಧಿಕಾರಿಗಳ ಪಾತ್ರ ಬಹು ಮುಖ್ಯವಾದುದಾಗಿರುತ್ತದೆ. ಎಂದು ಹೇಳಿದ್ದಾರೆ. ಮತ್ತೆಕೆಳಗಡೆ ಹೇಳಿದ್ದಾರೆ. ಸರ್ಕಾರವು ನಷ್ಟದಲ್ಲಿ ನಡೆಯುವ ಉದ್ಯಮಗಳ ಯಾವುದೇ ಅಧಿಕಾರಿಯನ್ನಾಗಲೀ ನಷ್ಟಕ್ಕೆ ಹೊಣೆಗಾರರನ್ನಾಗಿ ಮಾಡುವುದು ಔಚಿತ್ಯ ಹಾಗೂ ಅವಶ್ಯಕವೆಂದು ಸರ್ಕಾರವು ಭಾವಿಸಿರುವುದಿಲ್ಲ ಎಂದು ಹೇಳಿದ್ದಾರೆ. ೩,೪,೫,೬ ಮತ್ತು ೭ ಇದರಲ್ಲಿ ಅಧಿಕಾರಿಗಳು ಸ್ವಲ್ಪ ಆಸಕ್ತಿ, ನಿಷ್ಠೆ, ಜವಾಬ್ದಾರಿಯಿಂದ ಕೆಲಸ ಮಾಡಿದ್ದರೆ ನಷ್ಟ ನಿವಾರಿಸಬಹುದಾಗಿತ್ತು. ಅವರ ಅಧಕ್ಷತೆಯಿಂದ ಈ ರೀತಿಯಾಗಿದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಆಲೋಚನೆ ಮಾಡುತ್ತಾರೆಯೇ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರ ಸಲಹೆಯನ್ನು ನಾನು ಒಪ್ಪುತ್ತೇನೆ. ಯಾವುದೇ ಅಧಿಕಾರಿ ಒಂದು ಸಾರ್ವಜನಿಕ ಕಾರ್ಖಾನೆಯಲ್ಲಿ ಅದರ ಶಕ್ತಿಯನ್ನಾಗಲೀ, ಗಳಿಕೆಯನ್ನಾಗಲೀ ದುರುಪಯೋಗ ಮಾಡುವುದಕ್ಕೆ ಹೋದರೆ ಅಂಥವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದೇ ಅಲ್ಲ, ಉಗ್ರ ಕ್ರಮವನ್ನು ಕೂಡ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಬಿ.ಎಸ್. ಯಡಿಯೂರಪ್ಪ, ಸದಸ್ಯರು ಹಾಜರಿಲ್ಲ ಶ್ರೀಮತಿ ಶಕುಂತಲ ಟಿ. ಚೌಗುಲೆಯವರು ತಮ್ಮ ಪ್ರಶ್ನೆಯನ್ನು ಕೇಳಿ.

ಚಿಕ್ಕೋಡಿ ಪಟ್ಟಣದಲ್ಲಿ ಕುಡಿಯುವ ನೀರಿನ ಪೂರೈಕೆ ಬಗ್ಗೆ

೯೬೧ ಶ್ರೀ ಶಕುಂತಲಾ ಟಿ. ಚೌಗುಲೆ (ಚಿಕ್ಕೋಡಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕೋಡಿ ಪಟ್ಟಣದಲ್ಲಿ ಕುಡಿಯುವ ನೀರಿನ ಕೊರತೆಯಿಂದಾಗಿ ಅಲ್ಲಿನ ನಾಗರೀಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ೧೯೮೦ ರಿಂದ ಚಿಕ್ಕೋಡಿ ಪಟ್ಟಣದಲ್ಲಿ ಕುಡಿಯುವ ನೀರನ್ನು ವಾಹನಗಳಿಂದ ಪೂರೈಸುವ ಕಾರಿತು ಕೊಳವೆ ಬಾವಿಗಳನ್ನು ತೋಡಿಸಲು ಅವುಗಳನ್ನು ದುರಸ್ತಿಗೊಳಿಸಲು ಮುಂತಾದ ತಾತ್ಪೂರ್ತಿಕ ಪರಿಹಾರ ಕಾರ್ಯಗಳಿಗೆ ಮೆಚ್ಚತಕ್ಕ ಹಣವೆಷ್ಟು ?

ಇ) ಸದರಿ ತಾತ್ಪೂರ್ತಿಕ ಪರಿಹಾರ ಕಾರ್ಯಗಳಿಗೆ ಮೆಚ್ಚತಕ್ಕ ಹಣವನ್ನು ಉಪಯೋಗಿಸಿ ಒಂದು ಶಾಶ್ವತ ರೂಪದ ಯೋಜನೆಯನ್ನು ಸರ್ಕಾರದವರು ಹಮ್ಮಿಕೊಳ್ಳಲು ಸಾಧ್ಯತೆಗಳಿದ್ದಿಲ್ಲವೇ ?

ಈ) ಚಿಕ್ಕೋಡಿ ಪಟ್ಟಣದಲ್ಲಿ ಪ್ರತಿ ವರ್ಷವೂ ಪುನರಾವರ್ತನೆಯಾಗುವ ಈ ಬವಣೆಯನ್ನು ತಪ್ಪಿಸಲು ಸರ್ಕಾರದವರು ಯಾವುದಾದರೂ ಶಾಶ್ವತ ಪರಿಹಾರ ಯೋಜನೆ ರೂಪಿಸಿದ್ದಾರೆಯೇ ?

ಉ) ಹಾಗಿದ್ದಲ್ಲಿ ಅವರ ವಿವರಗಳೇನು ಮತ್ತು ಅದು ಎಂದಿನಿಂದ ಅನುಷ್ಠಾನಕ್ಕೆ ತರಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು).—

(ಅ) ಬಂದಿದೆ

(ಆ) ೧೯೮೦ ರಿಂದ ೧೬ ಕೊಳವೆ ಬಾವಿಗಳನ್ನು ತೋಡಿಸಲು ರೂ.೩,೮೫,೮೯೨,೬೯ ಹಣ ವೆಚ್ಚವಾಗಿದೆ.

(ಇ) ಇಲ್ಲಾ

(ಈ) ರೂಪಿಸಲಾಗಿದೆ

(ಉ) ಹಿಡಕಲ್ ಜಲಾಶಯದ ರಾಯಬಾಗ್ ವೇಲ್ಕಟ್ಟದ ಕಾಲುವೆಯನ್ನು ಮೂಲವಾಗಿಸಿ ೧೦೦ ಲಕ್ಷರೂಪಾಯಿ ಯೋಜನೆಯನ್ನು ರೂಪಿಸಲಾಗಿದೆ. ಇದನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಅನುಷ್ಠಾನಕ್ಕೆ ತರಲು ಉದ್ದೇಶಿಸಲಾಗಿದೆ.

ಶ್ರೀಮತಿ ಶಕುಂತಲ ಚೌಗುಲೆ.—ಮಾನ್ಯ ಅಧ್ಯಕ್ಷರೆ, ಹಿಡಕಲ್ ಜಲಾಶಯದ ರಾಯಭಾಗ್ ವೇಲ್ಕಟ್ಟದ ಕಾಲಂವೆಯ ಮುಖಾಂತರ ಚಿಕ್ಕೋಡಿ ಪಟ್ಟಣಕ್ಕೆ ನೀರು ತರಲು ೧೦-೧೨ ಕಿಲೋಮೀಟರ್ ದೂರವಾಗುತ್ತದೆ. ಅಲ್ಲದೆ ನೀರು ಅಲ್ಲಿ ೯ ತಿಂಗಳು ಮಾತ್ರ ಇರುತ್ತದೆ. ಆದರಿಂದ ಏನು ಉಪಯೋಗವಾಗುವುದಿಲ್ಲ. ಆದ್ದರಿಂದ ಕೃಷ್ಣಾ ಮೇಲ್ದಂಡೆಯೋಜನೆಯ ನೀರನ್ನು ಚಿಕ್ಕೋಡಿ ಪಟ್ಟಣಕ್ಕೆ ತರುವುದಾದರೆ ಅಂತರ ಕೂಡ ೭-೮ ಕಿಲೋಮೀಟರ್ ಆಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಯಾವ ರೀತಿ ಮಾಡುತ್ತಾರೆಂದು ಕೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯಣಿಯವರು ಹೇಳತಕ್ಕದ್ದು ನಿಜ. ೮ ತಿಂಗಳು ಮಾತ್ರ ನೀರು ಸಿಗುತ್ತದೆ, ಉಳಿದ ನಾಲ್ಕು ತಿಂಗಳು ನೀರು ಸಿಗುವುದಿಲ್ಲ ನೀರು ಸಿಗದೇ ಇರತಕ್ಕ ಸಂದರ್ಭದಲ್ಲಿ ಕೆಳಕೊಂಡಿ ಎಂಬ ಕೆರೆಯಲ್ಲಿ ನೀರನ್ನು ಶೇಖರಿಸಿಕೊಂಡು ಯಾವಾಗ ನೀರು ಸಿಗುವುದಿಲ್ಲವೋ ಆಗ ನೀರು ಕೊಡತಕ್ಕ ಕೆಲಸವನ್ನು ಮಾಡುತ್ತೇವೆ. ಚಿಕ್ಕೋಡಿ ಪಟ್ಟಣಕ್ಕೆ ಇರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿ ನೀರು ಕೊಡತಕ್ಕ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಹಿಂಡಸಗೇರಿಯವರು, ಬಂದಿಲ್ಲ.

ಕರ್ನಾಟಕ ರೇಷ್ಮೆ ಯೋಜನೆ ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಆಗಿರುವ ವೆಚ್ಚದ ಅಂಕಿ ಅಂಶಗಳು ಮತ್ತು ಆ ಕ್ಷೇತ್ರದಲ್ಲಿ ಉತ್ಪಾದನೆಯಾಗಿರುವ ರೇಷ್ಮೆ ಗೂಡು ಮತ್ತು ರೇಷ್ಮೆ ಬಗ್ಗೆ.

೪೫೪. (೫೯) ಜಿ. ರಾಜೂಗೌಡ (ಕೊಳ್ಳೇಗಾಲ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರೇಷ್ಮೆ ವ್ಯವಸಾಯ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ವಿಶ್ವಬ್ಯಾಂಕ್ ಯೋಜನೆಯಲ್ಲಿ ಮೈಸೂರು ಜಿಲ್ಲೆಗೆ ರೇಷ್ಮೆ ಬೆಳೆಗಾಗಿ ಎಷ್ಟು ಹಣ ವೆಚ್ಚ ಮಾಡಿ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಆ) ರೇಷ್ಮೆ ಸಹಕಾರ ಸಂಘಗಳಿಂದ ರೇಷ್ಮೆ ಬೇಸಾಯಕ್ಕೆ ಕಡ್ಡಿ ನೆಡಲು ಉಪಕರಣಗಳನ್ನು ಕೊಳ್ಳಲು ನೀರಾವರಿ ಬಾವಿಗಳಿಗಾಗಿ ಹುಳು ಸಾಕಣೆ ಮನೆಗೆ ಇನ್ನಿತರ ಪ್ರಗತಿಪರ ಕಾರ್ಯಗಳಿಗೆ ಎಷ್ಟು ಸಾಲವನ್ನು ಕೊಡಲಾಗಿದೆ ;

(ಇ) ೧೯೮೦-೮೧ಕ್ಕಿಂತ ೧೯೮೪-೮೫ರಲ್ಲಿ ಎಷ್ಟು ಎಕರೆಗಳಲ್ಲಿ ಹೆಚ್ಚು ಕಡ್ಡಿಯನು ಬೆಳೆಯುವಲಾಗಿದೆ ಎಷ್ಟು ರೇಷ್ಮೆ ಉತ್ಪಾದನೆ ಹೆಚ್ಚಾಗಿದೆ ;

(ಈ) ಹೊಸದಾಗಿ ರೇಷ್ಮೆ ಕಡ್ಡಿ ಹಾಕಿರುವ ಪ್ರದೇಶದಲ್ಲಿ ರೇಷ್ಮೆ ಇಳುವರಿಗೂ ಹಳೆ ದ್ಯೆಸೂರಿನಲ್ಲಿರುವ ರೇಷ್ಮೆ ಇಳುವರಿಗೂ ಇರುವ ಸಾಮ್ಯತೆಯೇನು ?